# ಭಿನ್ನ ಕಥನಗಳ ಬೃಂದಾ ಪಥ

■ ಸುಮಲತಾ ಎನ್‌



'ಕೌಸಲ್ಯಾ ಸುಪ್ರಜಾ ರಾಮ' ಚಿತ್ರದ ನಂತರ ಹಲವು ಸಿನಿಮಾಗಳನ್ನು ಬಗಲಲ್ಲಿಟ್ಟುಕೊಂಡಿರುವ ನಟಿ ಬೃಂದಾ ಆಚಾರ್ಯ ಅವರ ಕಣ್ಣಲ್ಲೀಗ ಸಿನಿಮಾರಂಗದ ಬಣ್ಣ ಬಣ್ಣದ ಕನಸುಗಳು. ಸದ್ಯ ಐದು ಸಿನಿಮಾಗಳಲ್ಲಿ ತೊಡಗಿಕೊಂಡಿರುವ ಬೃಂದಾ ಅವರಲ್ಲಿ ತಮ್ಮ ಪಾತ್ರಗಳು ಜನರ ಮನಸ್ಸನ್ನು ಮುಟ್ಟುವ ಭರವಸೆಯೂ ಇದೆ. ತಮ್ಮ ಸಿನಿಮಾ ಪ್ರಪಂಚದ ಬಗ್ಗೆ 'ಸುಧಾ'ದೊಂದಿಗೆ ಅವರು ಮಾತನಾಡಿದ್ದಾರೆ.

◆ 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ ನಂತರ ನಿಮ್ಮ ದಾರಿಯಲ್ಲಾದ ಬದಲಾವಣೆಯೇನು? ಏನೆಲ್ಲಾ ಹೊಸ ಕಲಿಕೆಯಾಯಿತು?

'ಕೌಸಲ್ಯಾ ಸುಪ್ರಜಾ ರಾಮ' ನನಗೆ ಹಲವು ಬಾಗಿಲುಗಳನ್ನು ತೆರೆದ ಸಿನಿಮಾ. ನನಗೆ ಬೇಕಾಗಿದ್ದನ್ನು ನಾನು ಆರಿಸಿಕೊಳ್ಳುವಂಥ ಅವಕಾಶಗಳನ್ನು ನೀಡಿತು. ಈ ಸಿನಿಮಾ ನಂತರ ಐದು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ. ಪ್ರತಿ ಸಿನಿಮಾದಲ್ಲಿಯೂ ಹೊಸತನ್ನು ಕಲಿಯುತ್ತಿದ್ದೇನೆ.

◆ ಯಾವ ರೀತಿಯ ಪಾತ್ರಗಳು ನಿಮ್ಮ ಅಪೇಕ್ಷೆಯ ಪಟ್ಟಿಯಲ್ಲಿವೆ?

ನಾನು ಸದ್ಯ ಅಭಿನಯಿಸುತ್ತಿರುವ ಈ ಐದೂ ಸಿನಿಮಾಗಳು ಬೇರೆ ಬೇರೆ ಜಾನರ್‌ಗಳವು. ನನ್ನ ಪಾತ್ರಗಳೂ ಒಂದಕ್ಕಿಂತ ಒಂದು ಭಿನ್ನ. ಒಂದು ಪಾತ್ರಕ್ಕೆ ನನ್ನನ್ನು ಅಪ್ರೋಚ್ ಮಾಡಿದಾಗ ನಾನು ನೋಡುವ ಅಂಶ, ಸ್ಕ್ರೀನ್ ಸ್ಪೇಸ್ ಹಾಗೂ ಆ ಪಾತ್ರದ ಪ್ರಾಮುಖ್ಯ. ನನಗೆ ಆ ಪಾತ್ರ ಚೆನ್ನಾಗಿದೆ ಅನ್ನಿಸಬೇಕು. ಥಿಯೇಟರ್‌ನಿಂದ ಹೊರಗೆ ಬಂದ ಮೇಲೂ ಆ ಪಾತ್ರ ಜನರ ಮನಸ್ಸಿನಲ್ಲಿ ಆಗಾಗ ಸುಳಿಯುತ್ತಿರಬೇಕು.

◆ ಪಾತ್ರದ ಏಕತಾನತೆಯಿಂದ ಹೊರಬರಲು ನೀವು ಆರಿಸಿಕೊಳ್ಳುವ ಮಾರ್ಗ?

ಒಂದು ಸಿನಿಮಾದಿಂದ ಮತ್ತೊಂದು ಸಿನಿಮಾದಲ್ಲಿ ನನ್ನ ಲುಕ್ ಬೇರೆ ಇರುವಂತೆ ನೋಡಿಕೊಳ್ಳುತ್ತೇನೆ. ಒಂದು ಸಿನಿಮಾದಲ್ಲಿ ಕಾಣಿಸಿಕೊಂಡಂತೆ ಮತ್ತೊಂದರಲ್ಲಿ ಇರಬಾರದು ಎನ್ನುವುದು ನನ್ನ ಅಪೇಕ್ಷೆ. ಒಂದೇ ರೀತಿ ಕಾಣಿಸಿಕೊಂಡರೆ ನನಗೇ ಬೋರ್ ಹೊಡೆಯುತ್ತೆ. ಇನ್ನು ಜನರಿಗೆ ಅನ್ನಿಸದೇ ಇರುತ್ತಾ? ಅದಕ್ಕೆ ಲುಕ್ ಕಡೆಗೆ ಗಮನ ಕೊಡುತ್ತೇನೆ. 'ಎಕ್ಸ್ ಅಂಡ್ ವೈ' ಸಿನಿಮಾದಲ್ಲಿ ಮೊದಲ ಬಾರಿಗೆ ಕಾಮಿಡಿ ಜಾನರ್ ಪ್ರಯತ್ನಿಸಿದ್ದೇನೆ. 'ಸತ್ಯ ಸನ್ ಆಫ್ ಹರಿಶ್ಚಂದ್ರ'ದಲ್ಲಿ ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್ ಆಗಿ ಜೋಶ್ ಪಾತ್ರದಲ್ಲಿದ್ದೇನೆ. 'ಒಂದ್ಸಲ ಮೀಟ್ ಮಾಡೋಣ' ಸಿನಿಮಾದಲ್ಲಿ ಹೋಮ್ಲಿ ಹುಡುಗಿ. ಹೀಗೆ ಭಿನ್ನ ಪಾತ್ರ, ಭಿನ್ನ ಲುಕ್.

◆ ಯಾವ ರೀತಿಯ ಕಥೆಗಳು ನಿಮಗೆ ಇಷ್ಟವಾಗುತ್ತವೆ?

ಪ್ರೇಕ್ಷಕಳಾಗಿ ಆಯ್ಕೆ ಮಾಡಬೇಕೆಂದರೆ, ರೊಮ್ಯಾಂಟಿಕ್ ಕಥೆಗಳು ತುಂಬಾ ಇಷ್ಟ. ಒಬ್ಬ ನಟಿಯಾಗಿ ನೋಡಿದರೆ, ಎಲ್ಲಾ ರೀತಿಯ ಕಥೆಗಳಲ್ಲಿ ನಟಿಸಬೇಕು, ಆ ಕಥೆಗೆ ಜೀವ ತುಂಬಬೇಕು ಎಂಬ ಮನಸ್ಸಿದೆ.

◆ ಐಟಿ ಕ್ಷೇತ್ರದಲ್ಲಿದ್ದ ನೀವು ಹಾದಿ ಹೊರಳಿಸಿ ನಟನೆಗೆ ಬಂದವರು. ಈಗ ತಿರುಗಿ ನೋಡಿದರೆ ಏನನ್ನಿಸುತ್ತದೆ?

ಈ ಹಾದಿಯಲ್ಲಿ ಹೆಜ್ಜೆ ಇಟ್ಟಿದ್ದಕ್ಕೆ ಖುಷಿಯಿದೆ. ಐಟಿ ಕೆಲಸ ಬಿಟ್ಟು ಸಿನಿಮಾರಂಗದತ್ತ ಹೋಗಬೇಡ ಎಂದು ಎಷ್ಟೋ ಜನ ಹೇಳಿದ್ದರು. ಆದರೆ ಪ್ರಯತ್ನವನ್ನಾದರೂ ಮಾಡಬೇಕೆಂದು ಸಿನಿಮಾರಂಗಕ್ಕೆ ಬಂದಿದ್ದೆ. ಸದ್ಯ ಖುಷಿ ಇದೆ.

◆ ಕನ್ನಡ ಸಿನಿಮಾರಂಗದಲ್ಲಿ ನಿಮಗೆ ಕಾಣುತ್ತಿರುವ ಪಾಸಿಟಿವ್ ಅಂಶಗಳು?

ಮಾಸ್ ಸಿನಿಮಾಗಳ ಏಕತಾನತೆಯಿಂದ ಹೊರಬಂದು ಕಂಟೆಂಟ್‌ನಲ್ಲಿ ಭಿನ್ನ ಪ್ರಯೋಗಗಳು ಹೆಚ್ಚಾಗುತ್ತಿವೆ. ಮಹಿಳಾ ಪಾತ್ರಗಳ ಟ್ರೀಟ್‌ಮೆಂಟ್ ಬದಲಾಗಿದೆ.

◆ ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?

'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ', 'ಎಕ್ಸ್ ಅಂಡ್ ವೈ', 'ಸತ್ಯ ಸನ್ ಆಫ್ ಹರಿಶ್ಚಂದ್ರ', 'ಒಂದ್ಸಲ ಮೀಟ್ ಮಾಡೋಣ', ಮತ್ತೊಂದು ಸಿನಿಮಾದಲ್ಲಿ ಅಭಿನಯಿಸುತ್ತಿದ್ದೇನೆ. ■

